# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1376
2. ಸದಸ್ಯರ ಹೆಸರು : ಶ್ರೀ ಮಧು.ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸ ಬೇಕಾದ ದಿನಾಂಕ : 18.12.2025
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಾವೇರಿ ನೀರಾವರಿ ನಿಗಮದ ಯೋಜನಾ ಅಚ್ಚುಕಟ್ಟು ವ್ಯಾಪ್ತಿಯ ಪ್ರದೇಶದಲ್ಲಿರುವ ಸಕ್ರಿಯ ನೀರು ಬಳಕೆದಾರರ ಸಂಘಗಳ ಸಂಖ್ಯೆ ಎಷ್ಟು; (ನಿಗಮ ವ್ಯಾಪ್ತಿಯ ಸಂಘಗಳ ಸಂಖ್ಯೆ ಹಾಗೂ ಸಂಘಗಳ ಹೆಸರನ್ನೊಳಗೊಂಡಂತೆ ಜಿಲ್ಲಾವಾರು ವಿವರವಾದ ಮಾಹಿತಿ ನೀಡುವುದು); | ಕಾವೇರಿ ನೀರಾವರಿ ನಿಗಮದ ಕಬಿನಿ, ಹಾರಂಗಿ, ಕೆ.ಆರ್.ಎಸ್. ಮತ್ತು ಹೇಮಾವತಿ ಯೋಜನಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ 209 ನೀರು ಬಳಕೆದಾರರ ಸಹಕಾರ ಸಂಘಗಳು ಸಕ್ರಿಯವಾಗಿರುತ್ತವೆ. ವಿವರಗಳನ್ನು **ಅನುಬಂಧ** ರಲ್ಲಿ ಲಗತ್ತಿಸಿದೆ. |
| ಆ) | ಕಾರ್ಯನಿರತ ನೀರು ಬಳಕೆದಾರರ ಸಹಕಾರ ಸಂಘಗಳಿಂದಲೇ ನೀರಿನ ಕರ (ಸೇವಾ ಶುಲ್ಕ) ವಸೂಲಿ ಮಾಡಲು ಅವಕಾಶ ಕಲ್ಪಿಸಿದ್ದರೂ ನಿಗಮ ವ್ಯಾಪ್ತಿಯ ಯಾವುದೇ ಜಿಲ್ಲೆಗಳಲ್ಲಿ ಈ ಆದೇಶ ಪಾಲನೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಯ ಕಬಿನಿ, ಹಾರಂಗಿ, ಕೆ.ಆರ್.ಎಸ್. ಮತ್ತು ಹೇಮಾವತಿ ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಗೆ ಒಳಪಡುವ ಕೊಡಗು, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಮತ್ತು ತುಮಕೂರು ಜಿಲ್ಲೆಗಳಲ್ಲಿ ಸಕ್ರಿಯ ನೀರು ಬಳಕೆದಾರರ ಸಹಕಾರ ಸಂಘಗಳಿಂದ ನೀರಿನ ಕರ (ಸೇವಾ ಶುಲ್ಕ) ವಸೂಲಿ ಮಾಡಲಾಗುತ್ತಿದೆ. |
| ಇ) | ಬಂದಿದ್ದಲ್ಲಿ, ಸಕ್ರಿಯ ನೀರು ಬಳಕೆದಾರರ ಸಹಕಾರ ಸಂಘಗಳಿಂದಲೇ ನೀರಿನ ಕರ (ಸೇವಾ ಶುಲ್ಕ) ವಸೂಲಿ ಮಾಡಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು; (ವಿವರವಾದ ಮಾಹಿತಿ ನೀಡುವುದು); | ನಿಗಮದಿಂದ ತಯಾರಿಸಲಾಗುವ ಡಿ.ಸಿ. ಬಿಲ್ಲು ಹಾಗೂ ನೀರು ಬಳಕೆದಾರರ ಸಹಕಾರ ಸಂಘಗಳಿಂದ ಕರ ವಸೂಲಿಗೆ ಸಂಬಂಧಪಟ್ಟಂತೆ ಸಕ್ರಿಯವಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ನೀರು ಬಳಕೆದಾರರ ಸಹಕಾರ ಸಂಘಗಳ ಕಾರ್ಯದರ್ಶಿ, ಆಡಳಿತ ಮಂಡಳಿ ನಿರ್ದೇಶಕರಿಗೆ ಸರ್ಕಾರದ ಅನುದಾನದಿಂದ ವಾಲ್ಮಿ ಧಾರವಾಡದಲ್ಲಿ ತರಬೇತಿ ನೀಡಲಾಗುತ್ತದೆ. |

<table>
<tr>
<td>ಈ)</td>
<td>ನೀರು ಬಳಕೆದಾರರ ಸಹಕಾರ ಸಂಘಗಳ ಬಲವರ್ಧನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು:</td>
<td>
ಕಾರ್ಯನಿರತ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ವಾರ್ಷಿಕ ಕಾರ್ಯಾನುದಾನ, ಮೂಲಭೂತ ಸೌಕರ್ಯ ಅನುದಾನ ಹಾಗೂ ಏಕಕಾಲಿಕ ಕಾರ್ಯಾನುದಾನ, ಗೋದಾಮು ಅನುದಾನ, ತರಬೇತಿಗಳನ್ನು ನೀಡುವ ಮೂಲಕ ಬಲವರ್ಧನೆಗೆ ಕ್ರಮವಹಿಸಲಾಗುತ್ತಿದೆ.<br>
ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ಜಲಸಂಪನ್ಮೂಲ ಇಲಾಖೆಗೆ ಸಂಬಂಧಿಸಿದಂತೆ ಶಿಫಾರಸ್ಸಿನ ಕಂಡಿಕೆ ಸಂಖ್ಯೆ:5.5 ಸಹಭಾಗಿತ್ವ ನೀರಾವರಿ ನಿರ್ವಹಣೆ ಅಡಿಯಲ್ಲಿ ನೀ.ಬ.ಸ.ಸಂಘಗಳ ನಿರ್ವಹಣೆಗಾಗಿ ರೂ.2.00 ಲಕ್ಷಗಳ ವಾರ್ಷಿಕ ಕಾರ್ಯಾನುದಾನವನ್ನು ಹೆಚ್ಚಿಸುವ ಪ್ರಸ್ತಾವನೆಯು ಅನುಮೋದನೆಯಾಗಿದ್ದು, ಪ್ರಸ್ತುತ ಆರ್ಥಿಕ ಇಲಾಖೆಯ ಸಹಮತಿ ಪ್ರಕ್ರಿಯೆ ಜಾರಿಯಲ್ಲಿದೆ.<br>
ಕರ್ನಾಟಕ ರಾಜ್ಯ ನೀರು ಬಳಕೆದಾರರ ಸಹಕಾರ ಸಂಘಗಳ ರಾಜ್ಯ ಮಟ್ಟದ ಶೃಂಗ ಮಹಾಮಂಡಳ ಕಾರ್ಯರೂಪಕ್ಕೆ ಬಂದ ಮೇಲೆ ನೀರು ಬಳಕೆದಾರರ ಸಹಕಾರ ಸಂಘಗಳ ಬಲವರ್ಧನೆಗೆ ಹೆಚ್ಚಿನ ಮಹತ್ವ ನೀಡುವುದಕ್ಕೆ ಕ್ರಮ ಕೈಗೊಳ್ಳಲಾಗುವುದು.
</td>
</tr>
<tr>
<td>ಉ)</td>
<td>ತ.ಮ.ವಿಜಯಭಾಸ್ಕರ್ ಅವರ ಅಧ್ಯಕ್ಷತೆಯ ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ 6ನೇ ವರದಿಯಲ್ಲಿನ ಅಂಶಗಳನ್ನು ಜಾರಿಗೊಳಿಸುವ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: ಒಟ್ಟು ಎಷ್ಟು ಅಂಶಗಳನ್ನು ಜಾರಿಗೊಳಿಸುವ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಒಟ್ಟು ಏಷ್ಟು ಅಂಶಗಳನ್ನು ಜಾರಿಗೊಳಿಸಲಾಗಿದೆ ಹಾಗೂ ಎಷ್ಟು ಬಾಕಿಯಿವೆ? (ವಿವರ ನೀಡುವುದು.)</td>
<td>
• ತ.ಮ.ವಿಜಯಭಾಸ್ಕರ್ ಅವರ ಅಧ್ಯಕ್ಷತೆಯ ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ 6ನೇ ವರದಿಯಲ್ಲಿನ ಅಂಶಗಳನ್ನು ಜಾರಿಗೊಳಿಸುವ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ಈ ಕೆಳಗಿನಂತಿದೆ:
<table>
<tr><td>ಕ್ರ.ಸಂ</td><td>ಶಿಫಾರಸ್ಸುಗಳು</td><td><u>ಶಿಫಾರಸ್ಸುಗಳ ಸಂಖ್ಯೆ</u></td></tr>
<tr><td>1.</td><td>ಅನುಷ್ಠಾನ ಪೂರ್ಣಗೊಂಡಿರುವ ಶಿಫಾರಸ್ಸುಗಳು</td><td>37</td></tr>
<tr><td>2.</td><td>ಇತರೆ ಇಲಾಖೆಗಳಲ್ಲಿ ಬಾಕಿ ಇರುವ ಶಿಫಾರಸ್ಸುಗಳು</td><td>26</td></tr>
<tr><td>3.</td><td>ಒಪ್ಪದ ಶಿಫಾರಸ್ಸುಗಳು</td><td>6</td></tr>
<tr><td>4.</td><td>ಪರಿಶೀಲನೆಯಲ್ಲಿರುವ ಶಿಫಾರಸ್ಸುಗಳು</td><td>19</td></tr>
<tr><td></td><td>ಒಟ್ಟು</td><td>88</td></tr>
</table>
• ತ.ಮ.ವಿಜಯಭಾಸ್ಕರ್ ಅವರ ಅಧ್ಯಕ್ಷತೆಯ ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ 6ನೇ ವರದಿಯಲ್ಲಿನ ನೀರು ಬಳಕೆದಾರರ ಸಹಕಾರ ಸಂಘಗಳ ಅಂಶಗಳ ಕುರಿತು 15 ಶಿಫಾರಿಸ್ಸಿನಲ್ಲಿ 10 ಶಿಫಾರಸ್ಸುಗಳು ಈಗಾಗಲೇ ಅನುಷ್ಠಾನಗೊಂಡಿರುತ್ತದೆ, 4 ಶಿಫಾರಸ್ಸುಗಳು ಇತರೆ ಇಲಾಖೆಗಳಲ್ಲಿ ಬಾಕಿ ಇರುತ್ತದೆ, 1 ಶಿಫಾರಸ್ಸು ಭಾಗಶ: ಅನುಷ್ಠಾನಗೊಂಡಿರುತ್ತದೆ.
<table>
<tr><td>1.</td><td>ಅನುಷ್ಠಾನ ಪೂರ್ಣಗೊಂಡಿರು</td><td><u>ಪ್ಯಾರಾ 5.4</u><br>(4), (5), (6)</td><td>ಒಟ್ಟು ಅನುಷ್ಠಾನ ಪೂರ್ಣಗೊಂಡಿರುವ</td></tr>
</table>
</td>
</tr>
</table>

| | | | | | |
|---|---|---|---|---|---|
| | | | ವ ಶೀಫಾರಸ್ಸುಗಳು | ಪ್ಯಾರಾ 5.5 (21), (27), (28), (31), (32), (33), (34) | ಶೀಫಾರಸ್ಸುಗಳು - 10 |
| | | 2 | ಇತರೆ ಇಲಾಖೆಗಳಲ್ಲಿ ಬಾಕಿ ಇರುವ ಶಿಫಾರಸ್ಸುಗಳು | ಪ್ಯಾರಾ 5.5 (24), (26), (30)<br>ಪ್ಯಾರಾ 5.10 (2) | ಒಟ್ಟು ಇತರೆ ಇಲಾಖೆಗಳಲ್ಲಿ ಬಾಕಿ ಇರುವ ಶಿಫಾರಸ್ಸುಗಳು - 4 |
| | | 3 | ಭಾಗಶ: ಅನುಷ್ಠಾನಗೊಂಡಿರುವ ಶಿಫಾರಸ್ಸು | ಪ್ಯಾರಾ 5.9 (1) | ಒಟ್ಟು ಭಾಗಶ: ಅನುಷ್ಠಾನಗೊಂಡಿರುವ ಶಿಫಾರಸ್ಸು - 1 |
| | | **ಒಟ್ಟು ಶಿಫಾರಸ್ಸುಗಳು** | | | **15** |

**ಸಂಖ್ಯೆ: ಜಸಂಇ:172:ಸಿಎಂ:2025**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**